**ದಿನಾಂಕಃ 16-03-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಜಿ.ಎಸ್.ಎಸ್. ವಕೀಲರಿಂದಃ**

ಸಣ್ಣೀರಪ್ಪನವರು ರೂ.500/-ಗಳನ್ನು ಸಾಲವಾಗಿ ನರಿಸಿಂಹಯ್ಯರವರಿಂದ ಪಡೆದು ಕೊಂಡಿರುವ ಬದ್ರುತೆಗಾಗಿ ದಿಃ02-09-1953 ರಂದು ನಾಮಕಾವಸ್ಥೆಯ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಣ್ಣೀರಪ್ಪ ಮತ್ತು ಕುಟುಂಬದವರು ಮಾರನಗೆರೆಯ ಪಿತ್ರಾರ್ಜಿತ ಆಸ್ತಿಯನ್ನು ಜಂಟಿಯಾಗಿ ಅನುಭವಿಸುತ್ತಿದ್ದರು ಎಂದರೆ ಸರಿ. ದಿಃ02-09-1953 ರ ಕ್ರಯ ಪತ್ರದ ಆಸ್ತಿಗಳನ್ನು ಸಹ ಸಣ್ಣೀರಪ್ಪ ಮತ್ತು ಕುಟುಂಬದವರು ಜಂಟಿಯಾಗಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ಚಿತ್ತ ಬಿನ್ ಬೀರ ಎಂಬುವವರು ಸಣ್ಣೀರಪ್ಪರವರ ತಂದೆ ಎಂದರೆ ಸರಿ.

2. ಚಿತ್ತಪ್ಪನ ಮಕ್ಕಳಾದ ಸಣ್ಣೀರಪ್ಪ ಮತ್ತು ಯರಪ್ಪ ಮತ್ತು ಕೆಚ್ಚನಪ್ಪ ಮಕ್ಕಳಾದ ಈರಣ್ಣ, ಚಿತ್ತಪ್ಪ ಮತ್ತು ಕಲ್ಲಪ್ಪರವರು ಕುಟುಂಬದ ಆಸ್ತಿಗಳನ್ನು ಯಾವಾಗ ಭಾಗ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನಗೆ ಬುದ್ಧಿ ಬರುವ ಮೊದಲೆ ಎಲ್ಲಾರು ಪ್ರತ್ಯೇಕವಾಗಿ ಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಚಿತ್ತಪ್ಪನ ಮಕ್ಕಳು ಮತ್ತು ಕೆಚನಪ್ಪನ ಮಕ್ಕಳು ಸುಮಾರು 45-50 ವರ್ಷಗಳ ಹಿಂದೆ ಬಾಯಿ ಮಾತಿನ ಮೂಲಕ ಮಾರಿನಗೆರೆ ಮತ್ತು ತಾವರೆಕೆರೆ ಕುಟುಂಬದ ಆಸ್ತಿಗಳಲ್ಲಿ ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿ. ಎ ದಾವಾ ಷೆಡ್ಯೂಲ್ ನ ಸ್ವತ್ತಿನ 1 ಮತ್ತು 3 ನೇ ಐಟಂಗಳಲ್ಲಿ ಪೂರ್ತಿ ಮತ್ತು 2 ರಲ್ಲಿ ಅರ್ಧ ಭಾಗ ಆಸ್ತಿಗಳು ಕೆಚನಪ್ಪ ನವರಿಗೆ ಮೌಖಿಕವಾಗಿ ಬಂದಿರುತ್ತದೆ ಎಂದರೆ ಸರಿ. ಬಿ ದಾವಾ ಷೆಡ್ಯೂಲ್ ಸ್ವತ್ತಿನ 1 ಮತ್ತು 2 ನೇ ಐಟಂಗಳಲ್ಲಿ ಪೂರ್ತಿ ಮತ್ತು ಎ ಷೆಡ್ಯೂಲ್ ನ ಸ್ವತ್ತಿನ ಅರ್ಧ ಭಾಗ ಆಸ್ತಿಗಳು ಚಿತ್ತಪ್ಪನ ಅಂದರೆ ಪ್ರತಿವಾದಿಗಳ ಕುಟುಂಬಕ್ಕೆ ಮೌಖಿಕವಾಗಿ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ಸಣ್ಣೀರಪ್ಪ ಬಿನ್ ಚಿತ್ತಪ್ಪನಿಗೆ ಸ.ನಂ.52/2 ಎ ರ ವಿಸ್ತೀರ್ಣ 1 ಎಕರೆ 25 ಗುಂಟೆ,

ಸ.ನಂ.67/1 ಎ ರ ವಿಸ್ತೀರ್ಣ 1 ಎಕರೆ 25 ಗುಂಟೆ ಜಮೀನು ಜಂಟಿಯಾಗಿ ಬಂದಿರುತ್ತದೆ ಎಂದರೆ ಸರಿ. ಮಾರನಗೆರೆಯ ಸ.ನಂ.73/2 ಎ ರ ಪೈಕಿ ಸಣ್ಣೀರಪ್ಪನಿಗೆ 3 ಎಕರೆ 5 ಗುಂಟೆ ಮತ್ತು ನನ್ನ ತಂದೆಯಾದ ಕಲ್ಲಪ್ಪನಿಗೆ 3 ಎಕರೆ 5 ಗುಂಟೆ ಬಂದಿರುತ್ತದೆ ಎಂದರೆ ಸರಿ. ಸ.ನಂ.60 ರ ಒಟ್ಟು ವಿಸ್ತೀರ್ಣ ಆ 12 ಎಕರೆ 4 ಗುಂಟೆ ಪೈಕಿ ಯರಪ್ಪ ಬಿನ್ ಚಿತ್ತಪ್ಪನಿಗೆ 6 ಎಕರೆ 2 ಗುಂಟೆ, ಈರಣ್ಣ ಬಿನ್ ಕೆಚನಪ್ಪನಿಗೆ 3 ಎಕರೆ 1 ಗುಂಟೆ ಮತ್ತು ಚಿತ್ತಪ್ಪ ಬಿನ್ ಕೆಚನಪ್ಪನಿಗೆ 3 ಎಕರೆ 1 ಗುಂಟೆ ವಿಭಾಗದ ಮೂಲಕ ಬಂದಿರುತ್ತದೆ ಎಂದರೆ ಸರಿ. ದಿಃ02-09-1953 ರ ಕ್ರಯಪತ್ರದ ಆಸ್ತಿಗಳ ಖಾತೆ ನರಿಸಿಂಹಯ್ಯನ ಹೆಸರಿನಲ್ಲಿರುವುದರಿಂದ ವಿಭಾಗ ಮಾಡಿಕೊಳ್ಳದೆ ಆಸ್ತಿಗಳು ಜಂಟಿಯಾಗಿರುತ್ತವೆ ಎಂದರೆ ಸರಿಯಲ್ಲ.

3. ಕೆಚನಪ್ಪ ಮತ್ತು ಚಿತ್ತಪ್ಪರವರ ಮೌಖಿಕ ವಿಭಾಗದಂತೆ ಮೇಲಿನ ಆಸ್ತಿಗಳಲ್ಲಿ ಅಂದರೆ ಮಾರನಗೆರೆ ಗ್ರಾಮದಲ್ಲಿರುವ ಆಸ್ತಿಗಳು ಸ್ವಾಧೀನ ಮತ್ತು ಖಾತೆ ಬದಲಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಮಗೆ ಖಾತೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಕಂದಾಯ ಅಧಿಕಾರಿಗಳ ಕೈತಪ್ಪಿನಿಂದ ತಾವರೆಕೆರೆ ಗ್ರಾಮದ ಆಸ್ತಿಗಳು ಸಣ್ಣಮ್ಮ ಕೋಂ ಸಣ್ಣೀರಪ್ಪನ ಹೆಸರಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ, ಆದರೆ ಎ ಷೆಡ್ಯೂಲ್ ಸ್ವತ್ತುಗಳು ಸಣ್ಣಮ್ಮನ ಹೆಸರಿನಲ್ಲಿ ಖಾತೆ ಪಹಣಿ ಬರುತ್ತದೆ ಎಂದರೆ ಸರಿ.

4. ದಿಃ02-09-1953 ರ ಕ್ರಯಪತ್ರವಾದ ನಂತರ ಕುಟುಂಬದವರೆಲ್ಲಾರೂ ಸೇರಿ ಪುನಃ ಕ್ರಯದ ಹಣವನ್ನು ನರಸಿಂಹಯ್ಯನವರಿಗೆ ವಾಪಸ್ಸು ನೀಡಿ 1 ನೇ ಪ್ರತಿವಾದಿಯ ಮಗನಾದ ಈರಣ್ಣ ಬಿನ್ ಸಣ್ಣೀರಪ್ಪನ ಹೆಸರಿನಲ್ಲಿ ಕುಟುಂಬದ ಪರವಾಗಿ ವಾಪಸ್ಸು ಕ್ರಯಪತ್ರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಗ ಈರಣ್ಣ ಬಿನ್ ಸಣ್ಣೀರಪ್ಪ ಎಂದರೆ ಸರಿ. ನನ್ನ ತಂದೆಯು ಸಂ.73/2 ಬಿ, 69/1 ಎ ಮತ್ತು 69/1 ಬಿ ರ ಆಸ್ತಿಗಳು ಬಿದಿರುಕೆರೆಯ ಈರಣ್ಣರವರ ಬರೆದುಕೊಟ್ಟ ಕ್ರಯಪತ್ರದಂತೆ ಖಾತೆಯಾಗಿರುತ್ತದೆ. ನನಗೆ ಕ್ರಯ ಪತ್ರದ ದಿನಾಂಕ ಗೊತ್ತಿಲ್ಲ ಆದರೆ 20 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ತಂದೆ ಹೆಸರಿಗೆ ಖಾತೆಯು ಸೃಷ್ಠಿ ಮಾಡಿರುವ ದಿಃ27-09-2001 ರ ನೊಂದಾಯಿತವಲ್ಲದ ವಿಭಾಗ ಪತ್ರದಂತೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ನೊಂದಾಯಿತವಲ್ಲದ ಪತ್ರವನ್ನು ನನ್ನ

ತಂದೆ ಕಲ್ಲಪ್ಪ ಮತ್ತು ದೊಡ್ಡಪ್ಪನ ಮಗ ಈರಣ್ಣ ನವರು ಸೃಷ್ಠಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ27-09-2001 ರ ಕ್ರಯ ಪತ್ರದಲ್ಲಿರುವ ಈರಣ್ಣ ಬಿನ್ ಸಣ್ಣೀರಪ್ಪನವರ ಹೆಸರನ್ನು ತೆಗೆದುಕೊಂಡು ನನ್ನ ದೊಡ್ಡಪ್ಪನ ಮಗ ಈರಣ್ಣ ಬಿನ್ ಈರಣ್ಣ ಎಂಬುವುದಾಗಿ ವಿಭಾಗ ಪತ್ರ ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರ ಸರಿಯಲ್ಲ. ನಿಪಿ.36 ರಂತೆ ಪಡೆದುಕೊಂಡ ಬ್ಯಾಂಕ್ ಹಣದ ಬಾಕಿ ಹಾಲಿ ಹಾಗೆ ಇರುತ್ತದೆ. ದಿಃ27-09-2001 ರ ನೊಂದಾಯಿತವಲ್ಲದ ವಿಭಾಗ ಪತ್ರ ಸಾಲ ಮರುಪಾವತಿ ಮಾಡದ ಕಾರಣ ಮೂಲ ಪ್ರತಿ ಬ್ಯಾಂಕಿನಲ್ಲಿರುತ್ತದೆ. ದಿಃ27-09-2001 ರ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ. ನನ್ನ ತಂದೆ ದಿಃ27-09-2001 ರ ವಿಭಾಗ ಪತ್ರವನ್ನು ಸೃಷ್ಠಿ ಮಾಡಿ ಪ್ರತಿವಾದ ಪತ್ರದ ಎ ಷೆಡ್ಯೂಲ್ ಸ್ವತ್ತುಗಳು ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ04-07-2001 ರ ಕ್ರಯಪತ್ರವನ್ನು ನನ್ನ ದೊಡ್ಡಪ್ಪ ಈರಣ್ಣ ಬಿನ್ ಈರಣ್ಣ ಎಂಬುವವರ ಹೆಸರಿನಲ್ಲಿ ಶ್ರೀನಿವಾಸ ಎಂಬುವವರ ಹೆಸರಿಗೆ ಸೃಷ್ಠಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಶ್ರೀನಿವಾಸ್ ಅವರ ಹೆಸರಿನಿಂದ ದಿಃ18-03-2003 ರಂದು 15ನೇ ಪ್ರತಿವಾದಿಗೆ ಕ್ರಯ ಪತ್ರ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಎ ಷೆಡೂಲ್ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಜಂಟಿ ಸ್ವಾಧೀನ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಭಾಗಕ್ಕೆ ಬಂದ ಆಸ್ತಿಗಳಾದ ದಾವಾ ಬಿ ಷೆಡ್ಯೂಲ್ ಸ್ವತ್ತುಗಳನ್ನು ದಿಃ16-03-2009 ರಂದು ಬೋಡೀರಪ್ಪ ಬಿನ್ ಬೋಡೀರಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಬೋಡೀರಪ್ಪ ರವರು ಸ.ನಂ.181/8 ರ 17 ಗುಂಟೆಯನ್ನು 14ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು ಮತ್ತು ಪ್ರತಿವಾದಿ ಸ್ವತ್ತುಗಳು ಪಿತ್ರಾರ್ಜಿತವಾಗಿರುವುದರಿಂದ ಭಾಗ ಇರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.